**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ 10001/2022**

**ಪಿರ್ಯಾದುದಾರರು** : ರಿಪ್ಪನ್ ಪೇಟೆ ಪೊಲೀಸ್ ಠಾಣೆ

ವಿರುದ್ಧ

**ಆರೋಪಿತರು** :

1) ಧನುಷ್ ಬಿನ್ ಯೋಮಕೇಶ,
ವಯಸ್ಸು ಸುಮಾರು 20 ವರ್ಷ,
ವಾಸಃ ತೀರ್ಥಹಳ್ಳಿರಸ್ತೆ, ರಿಪ್ಪನ್ ಪೇಟೆ,
ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

2) ಜೋಸೆಫ್ ಬಿನ್ ಶಾಜು ಯಾನೆ ಅನಿಷ್
ವಯಸ್ಸು ಸುಮಾರು 19 ವರ್ಷ,
ವಾಸಃ ಆನಂದಪುರ , ಸಾಗರ ,
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

3) ಸುಚನ್ ಬಿನ್ ಸುರೇಶ,
ವಯಸ್ಸು ಸುಮಾರು 22 ವರ್ಷ,
ವಾಸಃ ಹಳಿಯೂರು, ಗವಟೂರು ,
ರಿಪ್ಪನ್ ಪೇಟೆ, ಹೊಸನಗರ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

4) ಆದರ್ಶ ಯಾನೆ ಶರತ್ ಬಿನ್ ಪುಟ್ಟಪ್ಪಗೌಡ,
ವಯಸ್ಸು ಸುಮಾರು 19 ವರ್ಷ,
ವಾಸಃ ಮುತ್ತಿನ ಮನೆ ಕೊಳವಳ್ಳಿ,
ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆ

ಪ್ರ.1 ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುತ್ತೀರಾ?

ಉಃ

ಪ್ರಃ2 ಫ್ರಾ.ಸಾ.1 ಸೂರ್ಯನಾಯ್ಕ ರವರು ತಮ್ಮ ಸಾಕ್ಷ್ಯದಲ್ಲಿ –ದಿನಾಂಕ 10–09–2019 ರಂದು ರಿಪ್ಪನ್ ಪೇಟೆಯಲ್ಲಿ ಗಣೇಶ ಹಬ್ಬದ ಮೆರವಣಿಗೆ ಇದ್ದು ನಾನು , ನನ್ನ ಸ್ನೇಹಿತ ಚಾಸಾ–10 ಸದರಿ ಮೆರವಣಿಗೆಯನ್ನು ನೋಡಲು ಹೋಗಿದ್ದೆವು, ಶಿವಮಂದಿರದ ರಸ್ತೆಯಲ್ಲಿರುವ ಚಾಸಾ–14 ರವಿ ಇವರ ಫ್ರಾವಿಜನ್ ಸ್ಟೋರ್ ಹತ್ತಿರ ಹೋಗುತ್ತಿದ್ದಾಗ ಆರೋಪಿತರು ಏಕಾಏಕಿ ಬಂದು ನನ್ನನ್ನು ಮತ್ತು ಚಾಸಾ–10 ರವರನ್ನು ನೆಲಕ್ಕೆ ಕೆಡವಿ ಬೀಳಿಸಿ 1 ನೇ ಆರೋಪಿಯು ಈ ದಿನ ನಿನ್ನನ್ನು ಬಿಡುವುದಿಲ್ಲ , ಸಾಯಿಸುತ್ತೇನೆ ಎಂದು ಹೇಳಿ ತನ್ನ ಜೇಬಿನಲ್ಲಿರುವ ಚಾಕುವನ್ನು ತೆಗೆದು ನನ್ನ ಎದೆಯ ಎಡಭಾಗಕ್ಕೆ ಚುಚ್ಚಿದ್ದು , 2 ನೇ ಆರೋಪಿಯು ಚಾಸಾ10 ರವರಿಗೆ ತನ್ನ ಬೇಬಿನಲ್ಲಿದ್ದ ಚಾಕುವಿನಿಂದ ಚಾಸಾ–10 ರವರಿಗೆ ಬೆನ್ನು , ಎಡಭಾಗದ ಹೊಟ್ಟೆ, ಎಡಪಕ್ಕೆಗೆ ಚಾಕುವಿನಿಂದ ಚುಚ್ಚಿರುತ್ತಾನೆ, 3 ಮತ್ತು 4 ನೇ ಆರೋಪಿಗಳು ನನ್ನನ್ನು ಮತ್ತು ಚಾಸಾ–10 ರವರನ್ನು ಕೆಳಗೆ ಬೀಳಿಸಿ ಕಾಲಿನಿಂದ ತುಳಿದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ3 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಆಗ ನಾವು ಇಬ್ಬರೂ ಕೂಗಿಕೊಂಡಿರುತ್ತೇವೆ, ಆಗ ನನ್ನ ತಮ್ಮ ಸುದೀಪ ಚಾಸಾ–12 , ಚಾಸಾ–13 ಮತ್ತು ಇತರರು ಬಂದು ನಮ್ಮನ್ನು ಬಿಡಿಸಿದರು, ಆಗ ಆರೋಪಿಗಳು ಓಡಿ ಹೋಗಿರುತ್ತಾರೆ, ಆಗ ಸಮಯ ಸಂಜೆ 6–45 ಗಂಟೆ ಆಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ4 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–1 ಮತ್ತು 2 ನೇ ಆರೋಪಿತರು ನನಗೆ ಮತ್ತು ಚಾಸಾ–10 ರವರಿಗೆ ಚಾಕುವಿನಿಂದ ಹಲ್ಲೆ ಮಾಡಿದ್ದರಿಂದ ರಕ್ತಗಾಯ ಆಗಿದ್ದವು, ರಿಪ್ಪನ್ ಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ನಂತರ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ದಾಖಲಿಸಿರುತ್ತಾರೆ, ಸದರಿ ಗಲಾಟೆಗೆ ಕಾರಣವೆಂದರೆ ನನ್ನ ಅಕ್ಕ ಸಂಧ್ಯಾ ಕೆಲಸಕ್ಕೆ ಹೋಗಿ ಬರುವಾಗ 1 ನೇ ಆರೋಪಿ ಧನುಷ್ ಆ ಸಮಯದಲ್ಲಿ ಆಟೋ ಓಡಿಸುತ್ತಿದ್ದು ನನ್ನ ಅಕ್ಕನನ್ನು ಚುಡಾಯಿಸಿ ನಿನ್ನನ್ನು ಪ್ರೀತಿಸುತ್ತೇನೆ, ಮದುವೆಯಾಗುತ್ತೇನೆ ಎಂದು ಹೇಳಿ ಮನೆಯ ಬಳಿ ಬರುತ್ತಿದ್ದನು, ಅದಕ್ಕೆ ನಾವು ಬೈದಿದ್ದೆವು, ಆಗ 1 ನೇ ಆರೋಪಿ ನನ್ನ ಅಕ್ಕನ ಬಳಿ ನಿನ್ನ ತಮ್ಮನಿಗೆ ಸುಮ್ಮನೇ ಇರಲು ಹೇಳು ಇಲ್ಲ ಅಂದರೆ ಆತನಿಗೆ ಹೊಡೆಯುತ್ತೇನೆ ಎಂದು ಹೇಳಿದ್ದನು, ನಮ್ಮನ್ನು ಸಾಯಿಸುವ ಉದ್ದೇಶದಿಂದ ಆರೋಪಿತರು ಚಾಕುವಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ5 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಮೆಗ್ಗಾನ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ರಿಪ್ಪನ್ ಪೇಟೆ ಪೋಲೀಸರು ಬಂದಿದ್ದರು, ಪೋಲೀಸರ ಮುಂದೆ ನಾನು ಹೇಳಿಕೆ ನೀಡಿದ್ದು ಅದನ್ನು ಅವರು ಬರೆದುಕೊಂಡಿರುತ್ತಾರೆ, ಸದರಿ ಹೇಳಿಕೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಹೇಳಿಕೆ ದೂರು ನಿಪಿ –1 ಆಗಿದ್ದು ನಿಪಿ 1 ಕ್ಕೆ ನಾನು ನಿಪಿ –1(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ6 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಆರೋಪಿತರು ಹಲ್ಲೆ ಮಾಡಿದ ಸಮಯದಲ್ಲಿ ಕಪ್ಪು ಬಣ್ಣದ ಪ್ಯಾಂಟ್ ಮತ್ತು ಕಪ್ಪು ಬಣ್ಣದ ಶರ್ಟ್ ನ್ನು ಧರಿಸಿದ್ದೆನು, ನನಗೆ ಚಾಕುವಿನಿಂದ ಚುಚ್ಚಿದ್ದರಿಂದ ಸದರಿ ಶರ್ಟ್ ಮತ್ತು ಪ್ಯಾಂಟ್‌ಗೆ ಸದರಿ ಬಟ್ಟೆಗಳಿಗೆ ರಕ್ತ ತಾಗಿತ್ತು, ರಕ್ತ ಹತ್ತಿದ್ದ ನನ್ನ ಬಟ್ಟೆಗಳನ್ನು ರಿಪ್ಪನ್ ಪೇಟೆ ಪೋಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ, 1 ನೇ ಆರೋಪಿ ನನಗೆ ಚಾಕುವಿನಿಂದ ಚುಚ್ಚಿದ ಚಾಕುವನ್ನು ಮತ್ತು ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿ ಚಾಕುವನ್ನು ಮು ಮಾ –1 ಎಂದು , ಕಪ್ಪು ಬಣ್ಣದ ಶರ್ಟ್ ನ್ನು ಮು ಮಾ –2 , ಕಪ್ಪು ಬಣ್ಣದ ಪ್ಯಾಂಟ್ ನ್ನು ಮು ಮಾ –3 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರ:7 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಆರೋಪಿತರು ನೀವೇ ಆಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉ:

ಪ್ರ:8 ಫ್ರಾ.ಸಾ.2 ನಾಗೇಂದ್ರ ರವರು ತಮ್ಮ ಸಾಕ್ಷ್ಯದಲ್ಲಿ– ಪೋಲೀಸರು ಈ ಪ್ರಕರಣದಲ್ಲಿ ಪಂಚನಾಮೆಗೆ ಬರಬೇಕು ಎಂದು ನಿಪಿ –2 ನೋಟೀಸ್ ನ್ನು ಕೊಟ್ಟಿದ್ದರು ನಿಪಿ –2 ಕ್ಕೆ ನಿಪಿ –2 (ಎ) ರಂತೆ ಸಹಿ ಮಾಡಿರುತ್ತೇನೆ ಎಂದು , ಪೋಲೀಸರು ನಿಪಿ –2 ನ್ನು ಕೊಟ್ಟು ಘಟನಾ ಸ್ಥಳಕ್ಕೆ ಬರಬೇಕೆಂದು ಕೊಟ್ಟಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉ:

ಪ್ರ: 9 ಫ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಆರೋಪಿಗಳು ಫ್ರಾ ಸಾ –1 ರವರಿಗೆ ಚಾಕುವಿನಿಂದ ಚುಚ್ಚಿದ್ದಾರೆ ಅಲ್ಲಿ ಸ್ಥಳ ಪಂಚನಾಮೆ ಮಾಡಬೇಕು ಬನ್ನಿ ಎಂದು ನನಗೆ ತಿಳಿಸಿರುತ್ತಾರೆ, ನಾನು ಬೆಳಿಗ್ಗೆ 10–00 ಗಂಟೆಗೆ ಸ್ಥಳಕ್ಕೆ ಹೋಗಿರುತ್ತೇನೆ, ಗಲಾಟೆಯಾದ ಜಾಗವನ್ನು ಪೋಲೀಸರಿಗೆ ಚಾಸಾ–12 ತೋರಿಸಿರುತ್ತಾರೆ, ಪೋಲೀಸರು ಸ್ಥಳವನ್ನು ಪರಿಶೀಲನೆ ಮಾಡಿ ನಿಪಿ 3 ರಂತೆ ಮಹಜರ್ ಮಾಡಿ, ನಿಪಿ 3 ಕ್ಕೆ ನಿಪಿ 3(ಎ) ರಂತೆ ನನ್ನ ಸಹಿ ಪಡೆದಿರುತ್ತಾರೆ, ಸ್ಥಳದಲ್ಲಿ ನಿಪಿ 4 ರಂತೆ ನಕ್ಷೆ ತಯಾರಿಸಿರುತ್ತಾರೆ ಮತ್ತು ನಿಪಿ 5 ಮತ್ತು ನಿಪಿ 6 ರಂತೆ ಫೋಟೋಗಳನ್ನು ತೆಗೆಸಿರುತ್ತಾರೆ,

ಸದರಿ ನಕ್ಷೆ ಮತ್ತು ಮಹಜರ್ ಗೆ ನನ್ನ ಸಹಿ ಪಡೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 10 ಪ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ನಿಪಿ - 3 ಮತ್ತು 4 ಕ್ಕೆ ನಾನು ಮತ್ತು ಚಾಸಾ-2 ಮತ್ತು ಚಾಸಾ-12 ರವರು ಸಹಿ ಮಾಡಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ11 ಪ್ರಾ.ಸಾ.3 ವಾಸುದೇವ ರವರು ತಮ್ಮ ಸಾಕ್ಷ್ಯದಲ್ಲಿ- ದಿನಾಂಕಃ11-09-2019 ರಂದು ಪೋಲೀಸರು ಈ ಪ್ರಕರಣದಲ್ಲಿ ಪಂಚನಾಮೆಗೆ ಬರಬೇಕು ಎಂದು ನಿಪಿ 7 ರಂತೆ ನೋಟೀಸ್ ನ್ನು ನನಗೆ ಮತ್ತು ಚಾಸಾ-5 ರವರಿಗೆ ಜಾರಿ ಮಾಡಿದ್ದರು, ನಿಪಿ 7 ಕ್ಕೆ ನಿಪಿ - 7(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ12 ಪ್ರಾ.ಸಾ.3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ನಂತರ ಪೋಲೀಸರು ಬೆಳಿಗ್ಗೆ 11 ಗಂಟೆಗೆ ರಿಪ್ಪನ್ ಪೇಟೆ ಪೋಲೀಸ್ ಠಾಣೆಗೆ ಬರಲು ತಿಳಿಸಿದ್ದು ನಾನು ಮತ್ತು ಚಾಸಾ-5 ರವರು ಹೋಗಿರುತ್ತೇವೆ, ಪೋಲೀಸ್ ಠಾಣೆಗೆ ನಾವು ಹೋದಾಗ ಠಾಣೆಯಲ್ಲಿ ಚಾಸಾ - 27 ರವರು ಇದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ13 ಫ್ರಾ.ಸಾ.3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–1 ನೇ ಆರೋಪಿಯು ಪ್ರಾ ಸಾ –1 ರವರಿಗೆ ಮು ಮಾ –1 ಚಾಕುವಿನಿಂದ ಹಲ್ಲೆ ಮಾಡಿದ್ದಾರೆ ಎಂದು ತಿಳಿಸಿ ಮು ಮಾ –1 ನ್ನು ತೋರಿಸಿರುತ್ತಾರೆ, ಮು ಮಾ –1, 1 ನೇ ಆರೋಪಿಯ ಕೈಯಲ್ಲಿ ಇತ್ತು, ಸದರಿ ಮು ಮಾ–1 ಚಾಕುವನ್ನು ಪೋಲೀಸರು ಬಟ್ಟೆಯಲ್ಲಿ ಸುತ್ತಿ ಪ್ಯಾಕ್ ಮಾಡಿ ಸೀಲ್ ಮಾಡಿ ಅದಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ, ಪೋಲೀಸರು ಮು ಮಾ –1 ನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಬೆಳಿಗ್ಗೆ 11 ಗಂಟೆಯಿಂದ ಮದ್ಯಾಹ್ನ 12 ಗಂಟೆವರೆಗೆ ಬರವಣಿಗೆ ಮಾಡಿ ಅದಕ್ಕೆ ನನ್ನ ಸಹಿ ಪಡೆದಿರುತ್ತಾರೆ, ಸದರಿ ಬರವಣಿಗೆ ನಿಪಿ 8 ಜಪ್ತು ಮಹಜರ್ ಅಗಿದ್ದು ನಿಪಿ –8 ಕ್ಕೆ ನಿಪಿ –8(ಎ) ರಂತೆ ಸಹಿ ಮಾಡಿರುತ್ತೇನೆ, ನಿಪಿ –8 ಕ್ಕೆ ನನ್ನ ಜೊತೆಯಲ್ಲಿ ಚಾಸಾ–5 ಸಹಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 14 ಫ್ರಾ.ಸಾ.3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಪೋಲೀಸರು ನಿಪಿ –8 ರ ಸಮಯದಲ್ಲಿ ನಿಪಿ 9 ರಂತೆ ಫೋಟೋ ತೆಗೆದಿರುತ್ತಾರೆ, ನಿಪಿ –9 ರಲ್ಲಿ ನಾನು, ಚಾಸಾ–5, ಚಸಾ27 , 1 ನೇ ಆರೋಪಿ ಮತ್ತು ಇನ್ನೊಬ್ಬರು ಇರುತ್ತೇವೆ, ಆ ದಿನ ಪೋಲೀಸರು ಅಮಾನತ್ತುಪಡಿಸಿಕೊಂಡ ಚಾಕು ಮು ಮಾ –1 ಆಗಿರುತ್ತದೆ , ಮು ಮಾ 1 ರ ಮೇಲೆ ಇರುವ ಚೀಟಿಯ ಮೇಲೆ ನನ್ನ ಸಹಿ ಇರುತ್ತದೆ, ಆ ದಿನ ಮು ಮಾ –1 ನ್ನು

ಹಾಜರುಪಡಿಸಿದ 1 ನೇ ಆರೋಪಿಯನ್ನು ನೋಡಿ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ15 ಪ್ರಾ.ಸಾ.4 ಶರತ್ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ- ದಾರಿಯಲ್ಲಿ ನಾವು ಕಾರಿನಲ್ಲಿ ಹೋಗುತ್ತಿದ್ದಾಗ ರಿಪ್ಪನ್ ಪೇಟೆ ಪೋಲೀಸ್ ಠಾಣೆಯ ಪೋಲೀಸರು ಕರೆದು ಒಂದು ದಾಖಲೆಗೆ ಸಹಿ ಪಡೆದಿರುತ್ತಾರೆ, ಸದರಿ ದಾಖಲೆ ನಿಪಿ -7 ಪೋಲೀಸ್ ನೋಟೀಸ್ ಆಗಿದ್ದು , ನಿಪಿ 7 ಕ್ಕೆ ನಿಪಿ -7(ಬಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ16 ಪ್ರಾ.ಸಾ.4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ಸುಮಾರು 4 ವರ್ಷದ ಕೆಳಗೆ ರಿಪ್ಪನ್ ಪೇಟೆ ಪೋಲೀಸರು ಬೆಳಗಿನ ಸಮಯದಲ್ಲಿ ನನ್ನನ್ನು ಮತ್ತು ಚಾಸಾ-3 ರವರನ್ನು ಪೋಲೀಸ್ ಠಾಣೆಗೆ ಕರೆಸಿರುತ್ತಾರೆ, ಆ ಸಮಯದಲ್ಲಿ ರಿಪ್ಪನ್ ಪೇಟೆ ಪೋಲೀಸರು ಫೋಟೋ ತೆಗೆಸಿರುತ್ತಾರೆ , ಆ ಸಮಯದಲ್ಲಿ ಪೋಲೀಸರು ನನ್ನ ಮತ್ತು 1 ನೇ ಆರೋಪಿಯನ್ನು ನಿಲ್ಲಿಸಿ ನಿಪಿ -9 ಫೋಟೋವನ್ನು ತೆಗೆಸಿರುತ್ತಾರೆ , ನಿಪಿ -9 ಫೋಟೋದಲ್ಲಿ 1 ನೇ ಆರೋಪಿ ತನ್ನ ಕೈಯ್ಯಲ್ಲಿ ನೂಲಿನ ರೀತಿ ಬಟ್ಟೆ ಸುತ್ತಿದ್ದನ್ನು ಹಿಡಿದುಕೊಂಡಿರುತ್ತಾನೆ, ಪೋಲೀಸರು ನಿಪಿ -8 ಅಮಾನತ್ತು ಪಂಚನಾಮೆಗೆ ನಿಪಿ 8(ಬಿ) ರಂತೆ ನನ್ನ ಸಹಿ ಪಡೆದುಕೊಂಡಿರುತ್ತಾರೆ , ಮು ಮಾ -1 ರ ಮೇಲೆ ಕವರಿನ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ,, ನಾನು ನಿಪಿ -8 ಕ್ಕೆ ಸಹಿ

ಮಾಡಿದ ಸಂದರ್ಭದಲ್ಲಿ ಮು ಮಾ – 1 ಪೋಲೀಸ್ ಠಾಣೆಯ ಟೇಬಲ್ ಮೇಲೆ ಇತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ17 ಪ್ರಾ.ಸಾ.5 ಸಚಿನ್ ರವರು ತಮ್ಮ ಸಾಕ್ಷ್ಯದಲ್ಲಿ– ಪೋಲೀಸರು ಈ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ನಿಂತಿರುವ ವ್ಯಕ್ತಿಯಿಂದ ಚಾಕುವನ್ನು ನನ್ನ ಮತ್ತು ಚಾಸಾ–6 ರವರ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ, ನಮ್ಮನ್ನು ಪೋಲೀಸರು ಸಾಗರ ರಸ್ತೆಯ ರಿಪ್ಪನ್ ಪೇಟೆಯ ಕುಕ್ಕಳ್ಳಿ ಬಸ್ ಸ್ಟಾಂಡ್ ಬಳಿ ಕರೆದುಕೊಂಡು ಹೋಗಿದ್ದರು, ಸದರಿ ಸ್ಥಳದಲ್ಲಿ ಪೋಲೀಸರು ಫೋಟೋವನ್ನು ತೆಗಿಸಿರುತ್ತಾರೆ, ಸದರಿ ಫೋಟೋದಲ್ಲಿ ನಾನು , ಪೋಲೀಸರು, ಚಾಸಾ–6 ಮತ್ತು ಇನ್ನೊಬ್ಬ ವ್ಯಕ್ತಿ ಇರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 18 ಪ್ರಾ.ಸಾ.5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಪೋಲೀಸರು ನಿಪಿ 11 ರಂತೆ ಫೋಟೋವನ್ನು ತೆಗೆದ ನಂತರ ಸ್ಥಳದಲ್ಲಿ ಪೋಲೀಸರು ನಿಪಿ 10 ಜಪ್ತಿ ಪಂಚನಾಮೆಗೆ ನಿಪಿ –10(ಎ) ರಂತೆ ನನ್ನ ಸಹಿ ಪಡೆದಿರುತ್ತಾರೆ, ನನ್ನ ಜೊತೆ ನಿಪಿ –10 ಕ್ಕೆ ಚಾಸಾ–6 ರವರು ಸಹಿ ಮಾಡಿರುತ್ತಾರೆ, ಪೋಲೀಸರಿಗೆ ಚಾಕು ಕೊಟ್ಟಂತಹ 2 ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 19 ಪ್ರಾ.ಸಾ.5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಿಪಿ – 12 ನೋಟೀಸ್ ಗೆ ನಿಪಿ –12(ಎ)ಸಹಿ ಮಾಡಿರುತ್ತೇನೆ ಎಂದು, ಸಂಜೆ 6–30 ರಿಂದ 7–30 ರ ವರೆಗೆ ಪೋಲೀಸ್ ಜೀಪಿನ ಬೆಳಕಿನಲ್ಲಿ ನಿಪಿ –10 ನ್ನು ಪೋಲೀಸರು ಬರೆದಿರುತ್ತಾರೆ ಎಂದರೆ ಮಹಜರ್ ಮಾಡಿದ್ದಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ20 ಪ್ರಾ.ಸಾ.6 ನಿರೂಪ್ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ– ಪೋಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಪಂಚನಾಮೆಗೆ 2–3 ವರ್ಷಗಳ ಹಿಂದೆ ರಾತ್ರಿ 8–30 ಗಂಟೆ ಸಮಯದಲ್ಲಿ ಸಹಿ ಮಾಡಿರುತ್ತೇನೆ, ನಿಪಿ 11 ಫೋಟೋವನ್ನು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ21 ಪ್ರಾ.ಸಾ.6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಪೋಲೀಸರು ಫೋಟೋ ತೆಗೆದು, ನಿಪಿ –10 ಕ್ಕೆ ನಿಪಿ –10 (ಬಿ) ರಂತೆ ನನ್ನ ಸಹಿ ಪಡೆದಿರುತ್ತಾರೆ , ನಿಪಿ 12 ನೋಟೀಸ್ ಗೆ ನಿಪಿ –12(ಬಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 22 ಪ್ರಾ.ಸಾ. 7 ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ– ಚಾಸಾ–11 ರವರು ಬಸ್ಸಿನಲ್ಲಿ ಹೋಗುವಾಗ 1 ನೇ ಆರೋಪಿ ಆಕೆಯನ್ನು ಹಿಂಬಾಲಿಸುವುದು ಚುಡಾಯಿಸುವುದು, ಪ್ರೀತಿ ಮಾಡು ನಿನ್ನನ್ನು ಮದುವೆಯಾಗುತ್ತೇನೆ ಎಂದು ಹೇಳುತ್ತಾ ಹಿಂಬಾಲಿಸುತ್ತಿದ್ದ ಎಂದು ಚಾಸಾ–11 ರವರು ಪ್ರಾ ಸಾ –1 ರವರಿಗೆ ತಿಳಿಸಿದ್ದು ಪ್ರಾ ಸಾ –1 ರವರು ಈ ವಿಷಯವನ್ನು ನನಗೆ ತಿಳಿಸಿರುತ್ತಾರೆ, ಆಗ ನಾನು ಮತ್ತು ಪ್ರಾ ಸಾ –1 ರವರು 1 ನೇ ಆರೋಪಿಯನ್ನು ಕರೆದು ಆ ರೀತಿ ಮಾಡಬೇಡ ಎಂದು ಬುದ್ಧಿವಾದ ಹೇಳಿರುತ್ತೇವೆ , ನಾವು ಬುದ್ದಿವಾದ ಹೇಳಿದ ನಂತರ 1 ನೇ ಆರೋಪಿ ನಮ್ಮನ್ನು ಗುರಾಯಿಸುತ್ತಿದ್ದ, 1 ನೇ ಆರೋಪಿಯ ಸ್ನೇಹಿತರಾದ ಉಳಿದ ಆರೋಪಿತರು ಸಹ ಗುರಾಯಿಸುತ್ತಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 23 ಪ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ದಿನಾಂಕಃ 10–09–2019 ರಂದು ರಿಪ್ಪನ್ ಪೇಟೆಯಲ್ಲಿ ಹಿಂದು ಮಹಾಸಭಾ ಗಣಪತಿ ವಿಸರ್ಜನಾ ಮೆರವಣಿಗೆ ಇದ್ದು ಆಗ ನಾನು ಮತ್ತು ಪ್ರಾ ಸಾ –1 ರವರು ರಿಪ್ಪನ್ ಪೇಟೆಯ ಶಿವಮಂದಿರದ ಬಳಿ ಹೋಗುತ್ತಿದ್ದಾಗ ಚಾಸಾ–12 ನಮ್ಮ ಹಿಂದಿನಿಂದ ಬರುತ್ತಿದ್ದರು, ಸಂಜೆ 6–45 ಗಂಟೆ ಸಮಯದಲ್ಲಿ ನಾವು ಮೆರವಣಿಗೆ ನೋಡುತ್ತ ಶಿವಮಂದಿರದ ಎದುರು ರವಿ ಎಂಬುವವರ ಅಂಗಡಿಯ ಹತ್ತಿರ ಹೋಗುತ್ತಿದ್ದಾಗ ಆರೋಪಿತರು ನಮ್ಮನ್ನು ಹಿಂಬಾಲಿಸಿಕೊಂಡು ಬಂದು ಪ್ರಾ ಸಾ –1 ರವರಿಗೆ ನಿನ್ನನ್ನು ಇವತ್ತು ಬಿಡುವುದಿಲ್ಲ

ಸಾಯಿಸುತ್ತೇವೆ ಎಂದು ಹೇಳಿ ಪ್ರಾ ಸಾ –1 ರವರನ್ನು ಕೆಳಗಡೆ ಬೀಳಿಸಿರುತ್ತಾರೆ, ಆಗ 1 ನೇ ಆರೋಪಿ ಚಾಕುವನ್ನು ಹಿಡಿದುಕೊಂಡು ಪ್ರಾ ಸಾ –1 ರವರ ಕುತ್ತಿಗೆ ಭಾಗಕ್ಕೆ ಚಾಕುವಿನಿಂದ ಚುಚ್ಚಲು ಹೋದನು, ಆಗ ಪ್ರಾ ಸಾ 1 ರವರು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಚಾಕು ಪ್ರಾ ಸಾ 1 ರವರ ಎದೆಯ ಭಾಗಕ್ಕೆ ತಾಗಿದ್ದು ಆಗ ಪ್ರಾ ಸಾ–1 ಜೋರಾಗಿ ಕೂಗಿಕೊಂಡನು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 24 ಪ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಆಗ ನಾನು ಅಲ್ಲೇ ಇದ್ದು ಪ್ರಾಸಾ 1 ರವರ ಕೂಗು ಕೇಳಿದ ನಂತರ ನಾನು ತಪ್ಪಿಸಲು ಹೋಗಿರುತ್ತೇನೆ, ಆಗ 2 ನೇ ಆರೋಪಿ ನನ್ನನ್ನು ಕೆಳಗೆ ಬೀಳಿಸಿ ನನ್ನ ಎಡ ಹೊಟ್ಟೆಗೆ ಮತ್ತು ಎಡ ಪಕ್ಕೆಗೆ ಚಾಕುವಿನಿಂದ ಚುಚ್ಚಿರುತ್ತಾನೆ , ಆಗ ನಾನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ನನ್ನ ಬೆನ್ನಿಗೂ ಸಹ ಚಾಕುವಿನಿಂದ ಚುಚ್ಚಿರುತ್ತಾನೆ. ಆಗ ನಾನು ಕೂಗಿಕೊಂಡೆ, ಉಳಿದ ಆರೋಪಿತರು ಬಿಡಬೇಡಿ ಸಾಯಿಸಿ ಎಂದು ಹೇಳುತ್ತಿದ್ದರು, ಆಗ ಚಾ ಸಾ –12 ಮತ್ತು ಚಾ ಸಾ 14, ಚಾಸಾ–15 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ25 ಪ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಂತರ 1 ನೇ ಆರೋಪಿ ಚಾಕುವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾನೆ, ಆಗ ಆರೋಪಿತರು ಓಡಿ

ಹೋಗಿರುತ್ತಾರೆ, ನಂತರ ಚಾ ಸಾ –12 ಮತ್ತು ಚಾ ಸಾ 14, ಚಾಸಾ–15 ರವರು ನನ್ನನ್ನು ಮತ್ತು ಫ್ರಾ ಸಾ –1 ರವರನ್ನು ರಿಪ್ಪನ್ ಪೇಟೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಸದರಿ ಆಸ್ಪತ್ರೆಯಲ್ಲಿ ವೈಧ್ಯರು ಆಗುವುದಿಲ್ಲ ಎಂದು ಹೇಳಿದ್ದರಿಂದ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 26 ಫ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–1 ನೇ ಆರೋಪಿ ಫ್ರಾ ಸಾ –1 ರವರಿಗೆ ಮತ್ತು 2 ನೇ ಆರೋಪಿ ನನಗೆ ಚುಚ್ಚಿದ ಚಾಕುಗಳನ್ನು ಮು ಮಾ –1 ಮತ್ತು ಮು ಮಾ –4 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 27 ಫ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಚಾಕುವಿನಿಂದ ನಮಗೆ ಚುಚ್ಚಿದ್ದರಿದ ನಾವು ಧರಿಸಿದ್ದ ಬಟ್ಟೆಗಳಿಗೆ ರಕ್ತ ಆಗಿರುತ್ತದೆ ಅವುಗಳನ್ನು ಪೋಲೀಸರು ಆಸ್ಪತ್ರೆಯಲ್ಲಿ ತೆಗೆದುಕೊಂಡಿರುತ್ತಾರೆ, ಆ ಸಮಯದಲ್ಲಿ ನಾನು ಜೀನ್ಸ್ ಪ್ಯಾಂಟ್ ಹಾಗೂ ಕಪ್ಪು ಬಣ್ಣದ ಕುರ್ತಾ ಧರಿಸಿದ್ದೆನು, ಸಾಕ್ಷಿಯು ತಾನು ಧರಿಸಿದ್ದ ಜೀನ್ ಪ್ಯಾಂಟ್ ಮತ್ತು ಕಪ್ಪು ಬಣ್ಣದ ಕುರ್ತಾವನ್ನು ಮು ಮಾ –5 ಮತ್ತು ಮು ಮಾ –6 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ28 ಫ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಆರೋಪಿತರು ನೀವೇ ಆಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ29 ಫ್ರಾ.ಸಾ.8 ಸುದೀಪ್ ನಾಯ್ಕ ರವರು ತಮ್ಮ ಸಾಕ್ಷ್ಯದಲ್ಲಿ– ಚಾಸಾ–11 ರವರು ಗಾರ್ಮೆಂಟ್ಸ್ ಗೆ ಹೋಗುವಾಗ ಮತ್ತು ಬರುವಾಗ 1 ನೇ ಆರೋಪಿ ತೊಂದರೆ ಕೊಡುತ್ತಿದ್ದನು, ದಾರಿಯಲ್ಲಿ ಹೋಗುವಾಗ ಮತ್ತು ಬರುವಾಗ 1 ನೇ ಆರೋಪಿ ಚಾಸಾ–11 ರವರಿಗೆ ಚುಡಾಯಿಸುತ್ತಿದ್ದನು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 30 ಫ್ರಾ.ಸಾ.8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಚಾಸಾ–11 ರವರು 1 ನೇ ಆರೋಪಿಗೆ ನನಗೆ ತೊಂದರೆ ಕೊಡಬೇಡ ನನ್ನ ತಂಟೆಗೆ ಬರಬೇಡ ಎಂದು ಹೇಳಿರುತ್ತಾಳೆ, ಈ ರೀತಿ ಹೇಳಿದ ನಂತರವೂ ಸಹ 1 ನೇ ಆರೋಪಿ ಚುಡಾಯಿಸುವುದನ್ನು ಮುಂದುವರೆಸಿರುತ್ತಾನೆ, ನಂತರ ಫ್ರಾ ಸಾ –11 ರವರು ಈ ವಿಚಾರವನ್ನು ನಮ್ಮ ಮನೆಯಲ್ಲಿ ಹೇಳಿರುತ್ತಾಳೆ, ಈ ವಿಷಯ ನಮಗೆ ಗೊತ್ತಾದ ನಂತರ ನನ್ನ ಅಣ್ಣ ಫ್ರಾ ಸಾ –1 ರವರು 1 ನೇ ಆರೋಪಿಗೆ ವಾರ್ನ್ ಮಾಡಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 31 ಪ್ರಾ.ಸಾ.8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಸುಮಾರು 4–5 ವರ್ಷಗಳ ಹಿಂದೆ ರಿಪ್ಪನ್ ಪೇಟೆಯ ಹಿಂದೂ ಮಹಾ ಗಣಪತಿಯ ವಿಸರ್ಜನಾ ಕಾರ್ಯಕ್ರಮ ಇದ್ದು ಮೆರವಣಿಗೆಯನ್ನು ನೋಡಲು ನಮ್ಮ ಕುಟುಂಬದವರು ಎಲ್ಲರೂ ಹೋಗಿರುತ್ತೇವೆ, ನಮ್ಮ ಕುಟುಂಬದವರಲ್ಲದೇ ಅಕ್ಕಪಕ್ಕದವರು ಸಹ ಬಂದಿದ್ದರು, ಸಾಯಂಕಾಲ ಸುಮಾರು 6–40 ಗಂಟೆ ಸಮಯದಲ್ಲಿ ಚಾ ಸಾ 14 ರವರ ಮನೆಯ ಬಳಿ ಪ್ರಾ ಸಾ –1, ಪ್ರಾ ಸಾ 7 ರವರು ಮತ್ತು 1 ರಿಂದ 4 ನೇ ಆರೋಪಿತರ ನಡುವೆ ಗಲಾಟೆ ಆಗಿರುತ್ತದೆ, 1 ರಿಂದ 4 ನೇ ಆರೋಪಿತರು ಪ್ರಾ ಸಾ –1 ಮತ್ತು ಪ್ರಾ ಸಾ7 ರವರ ಜೊತೆ ಜಗಳ ಮಾಡಿ 1 ನೇ ಆರೋಪಿ ಪ್ರಾ ಸಾ –1 ರವರಿಗೆ ಚಾಕುವನ್ನು ಹಾಕಿರುತ್ತಾನೆ, 2 ನೇ ಆರೋಪಿ ಪ್ರಾ ಸಾ –7 ರವರಿಗೆ ಚಾಕು ಹಾಕಿರುತ್ತಾನೆ, ಪ್ರಾ ಸಾ –1 ರವರು ವಾರ್ನ್ ಮಾಡಿದ್ದರಿಂದ 1 ನೇ ಆರೋಪಿ ಪ್ರಾ ಸಾ –1 ರವರಿಗೆ ಚಾಕುವನ್ನು ಹಾಕಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 32 ಪ್ರಾ.ಸಾ.8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ ಸದರಿ ಜಗಳವನ್ನು ಚಾಸಾ–13 ಮತ್ತು ಚಾಸಾ–14 ರವರು ಬಿಡಿಸಿರುತ್ತಾರೆ, ಆಗ ಆರೋಪಿತರು ಎಲ್ಲರೂ ಓಡಿ ಹೋಗಿರುತ್ತಾರೆ, ಆರೋಪಿತರು ಓಡಿ ಹೋಗುವ ಸಮಯದಲ್ಲಿ ಚಾಕುವನ್ನು ಬಿಸಾಡಿ ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ33 ಪ್ರಾ.ಸಾ.8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಪ್ರಾ ಸಾ –1 ರವರಿಗೆ 1 ನೇ ಆರೋಪಿ ಚಾಕು ಹಾಕಿದ್ದರಿಂದ ಪ್ರಾ ಸಾ –1 ರವರ ಎದೆಗೆ ಮತ್ತು ಕೈಗೆ ಪೆಟ್ಟಾಗಿತ್ತು, ಪ್ರಾ ಸಾ 7 ರವರಿಗೆ ಬೆನ್ನಿಗೆ ಮತ್ತು ಹೊಟ್ಟೆಗೆ ಪೆಟ್ಟಾಗಿತ್ತು, ನಂತರ ಪ್ರಾ ಸಾ –1 ಮತ್ತು ಪ್ರಾ ಸಾ –7 ರವರನ್ನು ರಿಪ್ಪನ್ ಪೇಟೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿಂದ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ34 ಪ್ರಾ.ಸಾ.8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಪ್ರಾ ಸಾ –1 ಮತ್ತು ಪ್ರಾ ಸಾ7 ರವರಿಗೆ 1 ಮತ್ತು 2 ನೇ ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ಚಾಕುವನ್ನು ಮು ಮಾ –1 ಮತ್ತು ಮು ಮಾ –4 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 35 ಪ್ರಾ.ಸಾ.8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಆಸ್ಪತ್ರೆಯಲ್ಲಿ ಇದ್ದಾಗ ಪ್ರಾ ಸಾ –1 ರವರ ಹೇಳಿಕೆಯನ್ನು ರಿಪ್ಪನ್ ಪೇಟೆ ಪೋಲಿಸರು ಪಡೆದುಕೊಂಡಿರುತ್ತಾರೆ , ಗಲಾಟೆಯಾದ 2–3 ದಿನಗಳ ನಂತರ ಪೋಲೀಸರು ಜಗಳ ಆದ ಸ್ಥಳಕ್ಕೆ ಮಹಜರ್ ಮಾಡಲು ನನ್ನನ್ನು ಕರೆಸಿದ್ದರು, ಗಲಾಟೆಯಾದ ಜಾಗವನ್ನು ಪೋಲೀಸರಿಗೆ ನಾನು ತೋರಿಸಿರುತ್ತೇನೆ, ನಾನು ತೋರಿಸಿದ ಸ್ಥಳದಲ್ಲಿ ಪೋಲಿಸರು ನಿಪಿ –3 ರಂತೆ ಮಹಜರ್

ಮಾಡಿರುತ್ತಾರೆ, ನಿಪಿ –3 ಕ್ಕೆ ನಾನು ನಿಪಿ –3(ಬಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ36 ಪ್ರಾ.ಸಾ.8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಿಪಿ –3 ರ ಸಮಯದಲ್ಲಿ ಪೋಲೀಸರು ನಿಪಿ 5 ಮತ್ತು ನಿಪಿ6 ರಂತೆ ಫೋಟೋ ತೆಗೆದಿರುತ್ತಾರೆ, ನಿಪಿ –3 ರ ಸಮಯದಲ್ಲಿ ಪೋಲೀಸರು ನನ್ನ ಸಹಿ ಪಡೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 37 ಪ್ರಾ.ಸಾ.8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಿಪಿ –4 ಸ್ಥಳ ಕಚ್ಚಾ ನಕಾಶೆ ಗೆ ನಿಪಿ –4(ಬಿ) ರಂತೆ ಸಹಿ ಮಾಡಿರುತ್ತೇನೆ, ನಿಪಿ –3 ಮತ್ತು ನಿಪಿ 4 ಕ್ಕೆ ನನ್ನ ಜೊತೆಯಲ್ಲಿ ಚಾಸಾ–2 ಮತ್ತು ಪ್ರಾ ಸಾ –2 ರವರು ಸಹಿ ಮಾಡಿರುತ್ತಾರೆ, ನಿಪಿ –3 ಕ್ಕೆ ನಾನು ನಿಪಿ –3(ಬಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ38 ಪ್ರಾ.ಸಾ.8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಆರೋಪಿತರು ನೀವೇ ಆಗಿರುವುದಾಗಿ ಗುರುತಿಸಿ ಮತ್ತು ನಾನು ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 39 ಫ್ರಾ.ಸಾ.8 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – ಗಲಾಟೆಯು ದಿನಾಂಕಃ 10–09–2019 ರಂದು ಆಗಿರುತ್ತದೆ ಎಂದರೆ ಹೌದು, ಫ್ರಾ ಸಾ –1 ಮತ್ತು ಫ್ರಾ ಸಾ 7 ರವರು 1 ನೇ ಆರೋಪಿಗೆ ವಾರ್ನ್ ಮಾಡಿದ್ದು ಈ ಬಗ್ಗೆ ಆರೋಪಿತರು ಮಾತನಾಡಿಕೊಂಡು ಫ್ರಾ ಸಾ –1 ಮತ್ತು ಫ್ರಾ ಸಾ7 ರವರನ್ನು ಸಾಯಿಸುವ ಉದ್ದೇಶದಿಂದ ಅವರನ್ನು ಸುತ್ತು ಹಾಕಿಕೊಂಡು ಅವರನ್ನು ತಪ್ಪಿಸಿಕೊಳ್ಳಲು ಬಿಡದೇ ಈ ದಿನ ಇವರನ್ನು ಬಿಡುವುದಿಲ್ಲ ಎಂದು ಹೇಳಿ ಅವರನ್ನು ನೆಲಕ್ಕೆ ಕೆಡವಿದ್ದರು ಎಂದರೆ ಹೌದು ಎಂದು  ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 40 ಫ್ರಾ.ಸಾ.8 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – 1 ನೇ ಆರೋಪಿ ಫ್ರಾ ಸಾ –1 ರವರಿಗೆ ನನಗೆ ವಾರ್ನ್ ಮಾಡುತ್ತೀಯ ಸೂಳೇ ಮಗನೇ ಎಂದು ಬೈದಿದ್ದಿನು ಎಂದರೆ ಹೌದು,  1 ನೇ ಆರೋಪಿ ಫ್ರಾ ಸಾ –1 ರವರ ಕುತ್ತಿಗೆಗೆ ಚಾಕುವನ್ನು ಹಾಕಲು ಬಂದಿದ್ದು ಫ್ರಾ ಸಾ –1 ರವರು ಕೊಸರಾಡಿ ತಪ್ಪಿಸಿಕೊಂಡಿದ್ದು ಆಗ ಫ್ರಾ ಸಾ 1 ರವರ ಎದೆ ಭಾಗಕ್ಕೆ ಚುಚ್ಚಿರುತ್ತಾನೆ ಎಂದರೆ ಹೌದು ಎಂದು  ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 41 ಪ್ರಾ.ಸಾ.8 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – 2 ನೇ ಆರೋಪಿ ಪ್ರಾ ಸಾ –7 ರವರನ್ನು ಹಿಡಿದುಕೊಂಡು ಅವನನ್ನು ಕೊಲೆ ಮಾಡುವುದಾಗಿ ಹೇಳಿ ಪ್ರಾ ಸಾ 7 ಕೆಳಗೆ ಬಿದ್ದಾಗ ತನ್ನ ಕೈಯ್ಯಲ್ಲಿದ್ದ ಚಾಕುವಿನಿಂದ ಪ್ರಾ ಸಾ7 ರವರ ಎಡ ಹೊಟ್ಟೆ ಮತ್ತು ಎಡ ಪಕ್ಕೆಯ ಭಾಗಕ್ಕೆ ಚುಚ್ಚಿದ್ದನು ಎಂದರೆ ಹೌದು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ42 ಪ್ರಾ.ಸಾ.8 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – 3 ಮತ್ತು 4 ನೇ ಆರೋಪಿತರು ಅವರಿಬ್ಬರನ್ನು ಕೊಲೆ ಮಾಡಿ ಎಂದು ಹೇಳುತ್ತಾ ಪ್ರಾ ಸಾ –1 ಮತ್ತು ಪ್ರಾ ಸಾ 7 ರವರನ್ನು ಕಾಲಿನಿಂದ ತುಳಿಯುತ್ತಿದ್ದರು ಎಂದರೆ ಹೌದು, ಚಾಸಾ–13 ಮತ್ತು ಚಾಸಾ–14 ರವರು ಜಗಳವನ್ನು ಬಿಡಿಸಿದಾಗ 1 ಮತ್ತು 2 ನೇ ಆರೋಪಿತರ ಕೈಯಲ್ಲಿದ್ದ ಚಾಕು ಕೆಳಗೆ ಬಿದ್ದಿದ್ದು ಆಗ ಅವರು ಚಾಕುವನ್ನು ಎತ್ತಿಕೊಂಡು ಓಡಿ ಹೋದರು ಎಂದರೆ ಹೌದು, ಪೋಲೀಸರು ನನ್ನನ್ನು ವಿಚಾರ ಮಾಡಿದಾಗ ಈ ವಿಷಯವನ್ನು ಪೋಲೀಸರ ಮುಂದೆ ತಿಳಿಸಿರುತ್ತೇನೆ ಎಂದರೆ ಹೌದು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ43 ಪ್ರಾ.ಸಾ.9 ಸಂಧ್ಯಾರವರು ತಮ್ಮ ಸಾಕ್ಷ್ಯದಲ್ಲಿ– ನಾನು ಸಾಗರದ ಶಾಹಿ ಗಾರ್ಮೆಂಟ್ಸ್ ಗೆ ಕೆಲಸಕ್ಕೆ ಬಸ್ಸಿನಲ್ಲಿ ಹೋಗಿ ಬಂದು ಮಾಡುತ್ತಿದ್ದೆ, ನಮ್ಮ ಮನೆಯಿಂದ ನಡೆದುಕೊಂಡು ಬಂದು ರಿಪ್ಪನ್ ಪೇಟೆ ಸರ್ಕಲ್ ನಲ್ಲಿ ಬಸ್ ನ್ನು ಹತ್ತುತ್ತಿದ್ದೆ, ನಾನು ನಮ್ಮ ಮನೆಯಿಂದ

ನಡೆದುಕೊಂಡು ಬಂದು ಹೋಗಿ ಮಾಡುವಾಗ 1ನೇ ಆರೋಪಿಯು ನನಗೆ ಹಿಂಬಾಲಿಸಿ ಚುಡಾಯಿಸುತ್ತಿದ್ದ, ಪ್ರೀತಿ ಮಾಡುತ್ತೇನೆ, ನಿನ್ನನ್ನು ಮದುವೆ ಆಗುತ್ತೇನೆ ಎಂದು ಹೇಳುತ್ತಿದ್ದ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ44 ಪ್ರಾ.ಸಾ.9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಆಗ ನಾನು 1ನೇ ಆರೋಪಿಗೆ ನನ್ನನ್ನು ಹಿಂಬಾಲಿಸಬೇಡ ಎಂದು ಹೇಳಿದ್ದು ಆತ ಕೇಳಲಿಲ್ಲ, ಸದರಿ ವಿಷಯವನ್ನು ನಾನು ನನ್ನ ತಂದೆ ತಾಯಿ ಮತ್ತು ನನ್ನ ಕುಟುಂಬದವರಿಗೆ ಹೇಳಿರುತ್ತೇನೆ, ನಂತರ ನನ್ನ ತಮ್ಮ ಪ್ರಾ ಸಾ –1 ಮತ್ತು ಪ್ರಾ ಸಾ 8 ರವರು 1ನೇ ಆರೋಪಿಗೆ ನನ್ನ ತಂಟೆಗೆ ಬರದಂತೆ ಬುದ್ಧಿವಾದ ಹೇಳಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ45 ಪ್ರಾ.ಸಾ.9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ದಿನಾಂಕಃ10–09–2019 ರಂದು ರಿಪ್ಪನ್ ಪೇಟೆಯ ಹಿಂದೂ ಮಹಾ ಸಭಾ ಗಣಪತಿಯ ಮೆರವಣಿಗೆ ಇತ್ತು, ಮನೆಯಲ್ಲಿ ಎಲ್ಲರೂ ಹಬ್ಬದ ರೀತಿ ಆಚರಣೆ ಮಾಡಿದ್ದರು, ಗಣಪತಿ ವಿಸರ್ಜನೆ ಮಾಡುವ ಸಮಯದಲ್ಲಿ ನನ್ನ ತಮ್ಮಂದಿರು ಪ್ರಾ ಸಾ –7 ಮತ್ತು ಪ್ರಾ ಸಾ8 ರವರು ಮತ್ತು ಅವರ ಸ್ನೇಹಿತರು ಹೋಗಿದ್ದರು, ನಂತರ ಶಿವಮಂದಿರದ ರವಿ ಇವರ ಅಂಗಡಿ ಹತ್ತಿರ ಆರೋಪಿತರು ಪ್ರಾ ಸಾ –1 ಮತ್ತು ಪ್ರಾ ಸಾ 2 ರವರಿಗೆ ನನ್ನ ವಿಚಾರದಲ್ಲಿ ಸಾಯಿಸುವ

ಉದ್ದೇಶದಿಂದ 1 ನೇ ಆರೋಪಿಯು ನನ್ನ ತಮ್ಮನಿಗೆ ಚಾಕುವನ್ನು ಎದೆಗೆ ಹಾಕಿರುತ್ತಾನೆ , ಪ್ರಾ ಸಾ –7 ರವರಿಗೆ 2 ನೇ ಆರೋಪಿಯು ಚಾಕುವಿನಿಂದ ಸೊಂಟಕ್ಕೆ ಬೆನ್ನಿಗೆ ಹೊಟ್ಟೆಗೆ ಚುಚ್ಚಿದ್ದನು, ಉಳಿದ ಆರೋಪಿತರು ಅವರಿಗೆ ಕಾಲಿನಿಂದ ಒದ್ದಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ46 ಪ್ರಾ.ಸಾ.9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಂತರ ಪ್ರಾ ಸಾ –1 ಮತ್ತು ಪ್ರಾ ಸಾ 2 ರವರನ್ನು ರಿಪ್ಪನ್ ಪೇಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ನಂತರ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಪೋಲಿಸರು ಈ ಬಗ್ಗೆ ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ, ಆರೋಪಿತರು ನೀವೇ ಆಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ47 ಪ್ರಾ.ಸಾ.10 ರವಿಕುಮಾರ ರವರು ತಮ್ಮ ಸಾಕ್ಷ್ಯದಲ್ಲಿ – ಪ್ರಾ ಸಾ –1 ರವರ ಅಕ್ಕ ಪ್ರಾ ಸಾ 9 ರವರು ಸಾಗರದ ಶಾಹಿ ಗಾರ್ಮೆಂಟ್ಸ್ ಗೆ ಕೆಲಸಕ್ಕೆ ಹೋಗುತ್ತಿದ್ದಳು, ಪ್ರಾ ಸಾ –9 ರವರು ಗಾರ್ಮೆಂಟ್ಸ್ ಗೆ ಕೆಲಸಕ್ಕೆ ಹೋಗುವಾಗ ಬರುವಾಗ 1 ನೇ ಆರೋಪಿ ತನ್ನನ್ನು ಪ್ರೀತಿ ಮಾಡು ಮದುವೆಯಾಗುತ್ತೇನೆ ಎಂದು ಹೇಳುವ ವಿಚಾರ ನನಗೆ ಗೊತ್ತು, ಈ ವಿಚಾರದಲ್ಲಿ ಪ್ರಾ ಸಾ – 9 ರವರ ತಂಟೆಗೆ ಬರದಂತೆ ಪ್ರಾ ಸಾ 1 ಮತ್ತು ಪ್ರಾ ಸಾ7 ರವರು 1 ನೇ ಆರೋಪಿಗೆ ಎಚ್ಚರಿಕೆ ಕೊಟ್ಟಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ48 ಫ್ರಾ.ಸಾ.10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ದಿನಾಂಕಃ 10–09–2019 ರಂದು ರಿಪ್ಪನ್ ಪೇಟೆಯ ಹಿಂದೂ ಮಹಾಸಭಾ ಗಣಪತಿ ವಿಸರ್ಜನಾ ಮೆರವಣಿಗೆ ಇತ್ತು, ಸದರಿ ಮೆರವಣಿಗೆಯನ್ನು ನೋಡಲು ನಾನು ಹೋಗಿದ್ದೆನು, ಸದರಿ ಮೆರವಣಿಗೆ ಶಿವಮಂದಿರವನ್ನು ದಾಟಿ ಬಂದಿತ್ತು, ಆ ಸಮಯದಲ್ಲಿ ನನ್ನ ಜೊತೆಯಲ್ಲಿ ಚಾಸಾ13 ಮತ್ತು ಚಾಸಾ14 ಇದ್ದರು, ಸಂಜೆ 6–00 ರಿಂದ 6–45 ಗಂಟೆ ಸಮಯದಲ್ಲಿ ನಾನು ಫ್ರಾಸಾ –4 ರವಿ ರವರ ಅಂಗಡಿಯ ಹತ್ತಿರ ನಿಂತುಕೊಂಡಿದ್ದಾಗ ಫ್ರಾ ಸಾ –1 ಮತ್ತು ಫ್ರಾ ಸಾ 7 ರವರು ನಮ್ಮ ಮುಂದೆ ನಡೆದುಕೊಂಡು ಹೋಗುತ್ತಿದ್ದರು, ಅವರ ಹಿಂದೆ ಆರೋಪಿತರು ಹೋಗುತ್ತಿದ್ದರು, ಫ್ರಾ ಸಾ –1 ಮತ್ತು ಫ್ರಾ ಸಾ 7 ಮತ್ತು ಆರೋಪಿತರಿಗೂ ಮಾತಿಗೆ ಮಾತು ಆಗುತ್ತಿತ್ತು, ಆಗ 1 ನೇ ಆರೋಪಿಯು ಫ್ರಾ ಸಾ –1 ರವರ ಮೇಲೆ ಚಾಕುವಿನಿಂದ ಹಲ್ಲೆ ಮಾಡಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 49 ಫ್ರಾ.ಸಾ.10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– 2 ನೇ ಆರೋಪಿಯು ಫ್ರಾ ಸಾ –7 ರವರನ್ನು ಓಡಿಸಿಕೊಂಡು ಹೋಗಿ ಆತನಿಗೂ ಸಹ ಚಾಕುವಿನಿಂದ ಹಲ್ಲೆ ಮಾಡಿರುತ್ತಾನೆ, ಆಗ ಫ್ರಾ ಸಾ 7 ರವರು ಕೂಗಿಕೊಂಡಿದ್ದು ಆಗ ನಾವು ಮತ್ತು ಜನರು ಫ್ರಾ ಸಾ1 ಮತ್ತು ಫ್ರಾ ಸಾ 7 ರವರ ಹತ್ತಿರ ಓಡಿ ಹೋಗಿರುತ್ತೇವೆ, ಆ ಸಮಯದಲ್ಲಿ ಫ್ರಾ ಸಾ –1 ರವರ ಬೆನ್ನಿನ ಮೇಲೆ ರಕ್ತ ಬರುತ್ತಿತ್ತು, ಫ್ರಾ ಸಾ 7 ರವರಿಗೆ ಹೊಟ್ಟೆ ಪಕ್ಕದಲ್ಲಿ ರಕ್ತ

ಬರುತ್ತಿತ್ತು, ಆಗ ನಾವು ಅವರನ್ನು ಎತ್ತಿಕೊಂಡು ಆಸ್ಪತ್ರೆಗೆ ಸಾಗಿಸುತ್ತಿದ್ದೆವು, ಆರೋಪಿತರು ಆಗ ಪೋಲೀಸರನ್ನು ನೋಡಿ ಅಲ್ಲಿಂದ ಓಡಿ ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 50 ಫ್ರಾ.ಸಾ.10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಂತರ ಫ್ರಾ ಸಾ 1 ಮತ್ತು ಫ್ರಾ ಸಾ 7 ರವರನ್ನು ಬೈಕಿನಲ್ಲಿ ರಿಪ್ಪನ್ ಪೇಟೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ, ಸದರಿ ಆಸ್ಪತ್ರೆಯಿಂದ ಅಂಬ್ಯುಲೆನ್ಸನಲ್ಲಿ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ, ಆರೋಪಿತರು ಚಾಕುವನ್ನು ಗಲಾಟೆಯಾಗುವ ಸಮಯದಲ್ಲಿ ಕೆಳಗೆ ಬೀಳಿಸಿರುತ್ತಾರೆ ಮತ್ತೆ ಅದನ್ನು ತೆಗೆದುಕೊಂಡು ಹೋಗಿರುತ್ತಾರೆ, ಗಲಾಟೆಯ ಸಮಯದಲ್ಲಿ ಆರೋಪಿತರು ಫ್ರಾ ಸಾ –1 ಮತ್ತು ಫ್ರಾ ಸಾ –7 ರವರಿಗೆ ಹುಡುಗಿಯ ವಿಚಾರದಲ್ಲಿ ಅವಾಚ್ಯವಾಗಿ ಬೈಯ್ಯುತ್ತಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ51 ಫ್ರಾ.ಸಾ.10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಆರೋಪಿತರು ನೀವೇ ಆಗಿರುವುದಾಗಿ ಹಾಗೂ ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 52 ಫ್ರಾ.ಸಾ.10 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – ಆರೋಪಿತರು ಫ್ರಾ ಸಾ 1 ಮತ್ತು ಫ್ರಾ ಸಾ 7 ರವರನ್ನು ಕೆಳಗೆ ಕೆಡವಿದರು ಎಂದರೆ ಹೌದು, ನಾನು 1 ನೇ ಆರೋಪಿ ಫ್ರಾ ಸಾ 1 ರವರಿಗೆ ಹೊಡೆಯುವುದನ್ನು ನೋಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 53 ಫ್ರಾ.ಸಾ.10 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – 2 ನೇ ಆರೋಪಿ ಫ್ರಾ ಸಾ7 ರವರ ಎಡ ಹೊಟ್ಟೆ, ಎಡ ಪಕ್ಕೆಯ ಹತ್ತಿರ ಚುಚ್ಚಿದ್ದು ಫ್ರಾ ಸಾ 7 ತಪ್ಪಿಸಿಕೊಳ್ಳಲು ತಿರುಗಿದಾಗ ಚಾಕುವಿನಿಂದ ಚುಚ್ಚಿರುತ್ತಾನೆ ಎಂದರೆ ಹೌದು, 3 ಮತ್ತು 4 ನೇ ಆರೋಪಿತರು ಫ್ರಾ ಸಾ1 ಮತ್ತು ಫ್ರಾ ಸಾ7 ರವರನು ಕೊಲೆ ಮಾಡಿ ಎಂದು ಜೋರಾಗಿ ಹೇಳುತ್ತಿದ್ದರು ಮತ್ತು ಫ್ರಾ ಸಾ1 ಮತ್ತು ಫ್ರಾ ಸಾ7 ರವರಿಗೆ ಕಾಲಿನಿಂದ ಒದೆಯುತ್ತಿದ್ದರು ಎಂದರೆ ಹೌದು, ಪೋಲೀಸರ ಮುಂದೆ ನನ್ನ ಹೇಳಿಕೆಯಲ್ಲಿ 1 ಮತ್ತು 2 ನೇ ಆರೋಪಿತರು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಚುಚ್ಚಿರುತ್ತಾರೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಹೌದು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ54 ಫ್ರಾ.ಸಾ.11 ನವೀನ ರವರು ತಮ್ಮ ಸಾಕ್ಷ್ಯದಲ್ಲಿ – 2019 ರ ಸೆಪ್ಟಂಬರ್ ತಿಂಗಳಲ್ಲಿ ರಿಪ್ಪನ್ ಪೇಟೆಯ ಗಣಪತಿಯ ವಿಸರ್ಜನಾ ಕಾರ್ಯಕ್ರಮ ಇತ್ತು, ಸದರಿ ಗಣಪತಿ

ವಿಸರ್ಜನಾ ಮೆರವಣಿಗೆಗೆ ನಾನು ಹೋಗಿದ್ದೆನು, ಊರಿನವರು ಸಹ ಬಂದಿದ್ದರು, ಸಂಜೆ ಸುಮಾರು 6–00 ಗಂಟೆ ಸಮಯದಲ್ಲಿ ಪ್ರಾಸಾ1 ಮತ್ತು ಪ್ರಾಸಾ7 ರವರಿಗೆ ಗಲಾಟೆಯಲ್ಲಿ ಪೆಟ್ಟಾಗಿತ್ತು, ನಾನು ಪ್ರಾಸಾ1 ಮತ್ತು ಪ್ರಾಸಾ7 ರವರನ್ನು ರಿಪ್ಪನ್ ಪೇಟೆಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿ ಬಿಟ್ಟು ಬಂದಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ55 ಪ್ರಾ.ಸಾ.13 ಚಂದ್ರಶೇಖರ್ ಜಿ , ಪಿ ಡಿ ಒ ರವರು ತಮ್ಮ ಸಾಕ್ಷ್ಯದಲ್ಲಿ – ದಿನಾಂಕಃ 16–12–2019 ರಂದು ರಿಪ್ಪನ್ ಪೇಟೆ ಸಬ್ ಇನ್ಸ್ ಪೆಕ್ಟರ್ ರವರು ರವಿ ಯವರ ಮನೆಯ ಮುಂಭಾಗದಲ್ಲಿ ಗಲಾಟೆಯಾಗಿದ್ದು ಅದಕ್ಕೆ ಸಂಬಂಧಪಟ್ಟ ಹಾಗೆ ಮನೆಯ ದಾಖಲಾತಿಗಳನ್ನು ಕೇಳಿದ್ದರು, ನಾನು ದಿನಾಂಕಃ 23–02–2020 ರಂದು ಡಿ ಆರ್ ನಂಃ 368 ಬರುವೆ ಗ್ರಾಮಕ್ಕೆ ಸಂಬಂಧಪಟ್ಟದ್ದಾಗಿದ್ದು ಸದರಿ ಡಿ ಆರ್ ರೇಖಾ ಕೋಂ ರವಿರವರ ಹೆಸರಿಗೆ ಇದ್ದು ಈ ಬಗ್ಗೆ ನಾನು ಡಿಮ್ಯಾಂಡ್ ರಿಜಿಸ್ಟರ್ ನ್ನು ನಿಪಿ 15 ರಂತೆ ನೀಡಿರುತ್ತೇನೆ, ನಿಪಿ 16 ರಂತೆ ದೃಢೀಕರಣ ವನ್ನು ಕೊಟ್ಟಿರುತ್ತೇನೆ, ನಿಪಿ 15 ಮತ್ತು ನಿಪಿ 16 ಕ್ಕೆ ನಿಪಿ 15(ಎ) ಮತ್ತು ನಿಪಿ16(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ56 ಪ್ರಾ.ಸಾ.14 ಡಾಃ ಅನಿಲ್ ಕುಮಾರ್ ಎಂ.ಡಿ. Medical Officer, Government Hospital, Ripponpete ರವರು ತಮ್ಮ ಸಾಕ್ಷ್ಯದಲ್ಲಿ–

2. On 10-09-2019 at about 7.12 p.m. a patient by name Surya Naika, aged about 20 years was brought to the Rippon pet Government Hospital with the alleged history of assault. On examining the said Surya Naika, I found the following injuries on him:

Abrasion and cut injuries over the left chest- 1/4 x 4 inches.

3. I referred the said patient to the higher center through 108 Ambulance . After receiving the medical documents of the said patient from the Higher Center , I issued opinion stating that the, said injury sustained by the patient is simple in nature. The said injury had occurred within two hours from the time of the assault.

4. I have issued the wound certificate regarding the same. Now, I see the wound certificate. The said wound certificate is marked as Ex.P.17 and witness signature is marked as Ex.P.17(a).

5. On the same day i.e., on 10-09-2019, a patient by name Kumar aged about 23 years was brought by the public to the Hospital with the alleged history of assault. On examining the said patient, I found the following injuries:-

1. Incised injury over the left flank measuring around 1 X 1 inch .

2. In sized injury over the lumbar region measuring 1 X 1 inch.

6. I referred the said patient to the higher center through 108 Ambulance . After receiving the medical documents of the said patient from the Higher Center , I issued opinion stating that the, said injuries sustained by the patient is grievous in nature. The said injuries had occurred within two hours from the time of the assault.

7. I have issued the wound certificate regarding the same. Now, I see the wound certificate. The said wound certificate is marked as Ex.P.18 and witness signature is marked as Ex.P.18(a).

8. I collected the blood stained cloths of the said patients, packed the same in a sealed cover and handed over the same to the police. I can identified the said blood stained cloths of the said patients.

9. Now I see the blood stained cloths of the Surya Naika and Kumara. The same are already marked as MO 2 and MO 3.

10. Further, on 25-02-2020, I received a requisition from the PSI, Ripponpet Police Station along with the three knives for examination and for issuing opinion. After examining the said weapons I issued opinion stating that the said injuries can be inflected by using the said weapons.

11. Now I see the said opinion issued by me, the said opinion is marked as Ex. P 19 and the witness signature is marked as Ex.P19(a).

12. I can identify the said weapons examined by me. Now, I see the said weapons before the court and the same are marked as M.O.1 and M.O. 4.

13. After examining the knives, I re-packed the said knives and handed over the same to the concerned police.

ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 57 ಪ್ರಾ.ಸಾ.15 Bhuvaneshwari M.S.**Senior Scientific officer at RFSL, Davanagere** ರವರು ತಮ್ಮ ಸಾಕ್ಷ್ಯದಲ್ಲಿ –

2. On 10-12-2019, our Office received 5 sealed articles from Santhosha P.C. 1468 of Ripponpete Police station, pertaining to Crime No. 116/2019. Our reception section received the said articles and the same was registered as RFSL/BS/785/2019. The said articles were sent to biological section for chemical analysis and for issuance of report. I have received the said articles and scrutinized the seal over the said articles and the same were intact and tallied with the sample seal.

3. After opening the said five sealed articles, I found the following.

a. One knife
b. One shirt
c. One Jeans pant
d. One shirt
e. One Jeans pant

4. I subjected the said articles for chemical analysis and microscopic examination. After examination of the said articles I issued report stating that Items No. 1 to 5 were stained with human blood and Item No.2 and 3 were stained with O group blood and item No. 1, 4 and 5 were stained with A group blood.

5. Regarding the same I have issued report by taking counter signature of Assistant Director in the said report. Now, I see the said report issued by me and the same is marked as Ex.P.20 and the witness signature is marked as Ex.P.20(a).

6. After examining the articles, I repacked the same, sealed it and forwarded the same to the police along with the sample seal of our Laboratory.

7. Now, I see the Five articles examined by me and same are already marked as MO 1 to 3, 5 and 6.

ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ58 ಫ್ರಾ.ಸಾ.16 Dr. Sunil H. Assistant Professor, Mc–Gann Hospital, Shivamogga ರವರು ತಮ್ಮ ಸಾಕ್ಷ್ಯದಲ್ಲಿ –

2. On 10-09-2019 at about 8-56 p.m., a patient by name Surya Naika, was admitted to our Hospital. He had sustained assault injuries on left side of his chest and anterior portion.

3. My Assistant staff sutured the wound of the patient. He was admitted in our Hospital for further evaluation and he was given Anti-Biotics. X-ray and CT Scan were done and they were within the normal limits. The patient had not sustained any internal injuries. The said patient was discharged from our hospital on 16.09.2019.

4. The nature of the injury sustained by the patient was cut lacerated wound involving skin and soft tissue. The said injury was not grievous.

Now, I see the certificate issued by our Hospital regarding the treatment given to the patient by name Surya Naika and the same is marked as Ex.P21.

5. On 10-09-2019 at about 8-56 p.m., a patient by name Kumara, was brought to our Hospital. He had sustained assault injuries on left flank and lumber.

6. My Assistant staff sutured the wound of the said patient. He was given first aid and he was referred to Nanjappa Hospital for further treatment.

7. Now, I see the certificate issued by our Hospital, regarding the treatment given to the said Kumar. The said certificate is marked at Ex.P22.

ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 59 ಪ್ರಾ.ಸಾ.17 ಎಂ. ಗಣಪತಿ, ನಿವೃತ್ತ ಎ ಎಸ್ ಐ ರವರು ತಮ್ಮ ಸಾಕ್ಷ್ಯದಲ್ಲಿ–

ದಿನಾಂಕಃ 16–12–2019 ರಂದು ನಾನು ಠಾಣೆಯಲ್ಲಿರುವಾಗ ಚಾಸಾ28 ರವರು ಈ

ಪ್ರಕರಣದ ಕಡತವನ್ನು ತೆಗೆದುಕೊಂಡು, ಈ ಪ್ರಕರಣದಲ್ಲಿ 2 ನೇ ಆರೋಪಿ ಜೋಸೆಫ್ ಇವರು ಮಾನ್ಯ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು, ಇವರನ್ನು ಕೂಲಂಕುಶವಾಗಿ ವಿಚಾರಣೆ ಮಾಡಿ ನ್ಯಾಯಾಲಯದ ಆದೇಶದಂತೆ ಕ್ರಮ ಜರುಗಿಸುವಂತೆ ನನಗೆ ಆದೇಶ ಮಾಡಿದರು, ನಾನು ಅದರಂತೆ 2 ನೇ ಆರೋಪಿಯನ್ನು ವಿಚಾರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ60 ಪ್ರಾ.ಸಾ.17 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಚಾಸಾ28 ರವರು ನನಗೆ 2 ನೇ ಆರೋಪಿ ಕೃತ್ಯಕ್ಕೆ ಬಳಸಿದ ಚಾಕುವನ್ನು ತೋರಿಸುತ್ತೇನೆ ಎಂದು ಹೇಳಿರುತ್ತಾನೆ ಆದ್ದರಿಂದ ನೀವು 2 ನೇ ಆರೋಪಿಯನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ಮಹಜರ್ ಕ್ರಮ ಜರುಗಿಸಬೇಕೆಂದು ಹೇಳಿದರು, ನಾನು ಅದರಂತೆ ಪಂಚರಾದ ಚಾಸಾ6 ಮತ್ತು ಚಾಸಾ7 ರವರನ್ನು ಠಾಣೆಗೆ ಕರೆಸಿಕೊಂಡು ಅವರಿಗೆ ವಿಚಾರ ತಿಳಿಸಿ ನಿಪಿ 12 ರಂತೆ ನೋಟೀಸ್ ನ್ನು ಜಾರಿ ಮಾಡಿರುತ್ತೇನೆ, ನಿಪಿ 12 ನೋಟೀಸ್‌ಗೆ ನಿಪಿ12(ಸಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 61 ಪ್ರಾ.ಸಾ.17 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಂತರ ಇಲಾಖಾ ಜೀಪ್ ನಲ್ಲಿ ನಾನು, 2 ನೇ ಆರೋಪಿ ಮತ್ತು ಪಂಚರು ಸಾಗರ ರಸ್ತೆಯಲ್ಲಿ ಹೋಗುತ್ತಿರುವಾಗ,

ಕುಕ್ಕಳಲೆ ಕ್ರಾಸ್ ಬಳಿ 2 ನೇ ಆರೋಪಿ ನನಗೆ ಜೀಪ್ ನಿಲ್ಲಿಸುವಂತೆ ಹೇಳಿದನು, ಆಗ ನಾವು ಜೀಪ್ ನ್ನು ನಿಲ್ಲಿಸಿದೆವು, 2 ನೇ ಆರೋಪಿ ಜೀಪ್ ನಿಂದ ಇಳಿದು ಮುಂದೆ ಹೋಗಿ ಅಲ್ಲೇ ಬಸ್ ನಿಲ್ದಾಣದಲ್ಲಿ ಹೆಂಚಿನ ಮಾಡಿನಲ್ಲಿ ಇಟ್ಟಿದ್ದ ಚಾಕುವನ್ನು ತೆಗೆದುಕೊಂಡು ಬಂದು, ಸದರಿ ಚಾಕುವಿನಿಂದ ಗಾಯಾಳು ಕುಮಾರನಿಗೆ ಹೊಟ್ಟೆಯ ಭಾಗ ಮತ್ತು ಕೈಗೆ ಹಲ್ಲೆ ಮಾಡಿರುತ್ತೇನೆ ಎಂದು ತಿಳಿಸಿದನು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 62 ಫ್ರಾ.ಸಾ.17 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ಸದರಿ ಚಾಕುವನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಸಂಜೆ 6-30 ರಿಂದ 7-30 ಗಂಟೆ ವರೆಗೆ ಜೀಪ್ ನ ಬೆಳಕಿನ ಸಹಾಯದಿಂದ ನಿಪಿ 10 ರಂತೆ ಅಮಾನತ್ತು ಪಂಚನಾಮೆ ಜರುಗಿಸಿರುತ್ತೇನೆ, ಪಂಚನಾಮೆ ಸಮಯದಲ್ಲಿ ಫೋಟೋಗಳನ್ನು ತೆಗೆಸಿರುತ್ತೇನೆ, ನಿಪಿ 10 ಕ್ಕೆ ನಿಪಿ10(ಸಿ) ರಂತೆ ಸಹಿ ಮಾಡಿರುತ್ತೇನೆ , ನಿಪಿ 10 ರಲ್ಲಿರುವ 2 ನೇ ಆರೋಪಿಯ 2 ನೇ ಆರೋಪಿಯ ಸಹಿಯನ್ನು ನಿಪಿ10(ಡಿ) ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ63 ಫ್ರಾ.ಸಾ.17 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ನಿಪಿ -11, ನಿಪಿ 23 ಮತ್ತು 24 ಫೋಟೋಗಳು ಪಂಚನಾಮೆಯ ಸಮಯದಲ್ಲಿ ತೆಗೆದ

ಫೋಟೋಗಳಾಗಿರುತ್ತವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ64 ಪ್ರಾ.ಸಾ.17 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ನಂತರ ಠಾಣೆಗೆ ವಾಪಾಸ್ಸಾಗಿ ಅಮಾನತ್ತುಪಡಿಸಿಕೊಂಡ ಚಾಕುವನ್ನು ಠಾಣಾ ಮಾಲುಪಟ್ಟಿ ಸಂಃ 114/2019 ರಲ್ಲಿ ಅಳವಡಿಸಿಕೊಂಡಿರುತ್ತೇನೆ, ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ28 ರವರಿಗೆ ಹಸ್ತಾಂತರ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ65 ಪ್ರಾ.ಸಾ.17 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ಮು ಮಾ -4, 2 ನೇ ಆರೋಪಿಯಿಂದ ಅಮಾನತ್ತುಪಡಿಸಿಕೊಂಡ ಚಾಕು ಆಗಿರುತ್ತದೆ ಹಾಗೂ 2 ನೇ ಆರೋಪಿ ನೀವೇ ಆಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ66 ಪ್ರಾ.ಸಾ.18 ಅರುಣ ಕೆ ಎಂ , ಮುಖ್ಯ ಪೇದೆ, ಶಿವಮೊಗ್ಗ ಮಹಿಳಾ ಪೋಲೀಸ್ ಠಾಣೆ ರವರು ತಮ್ಮ ಸಾಕ್ಷ್ಯದಲ್ಲಿ - ದಿನಾಂಕಃ 10-09-2019 ರಂದು ರಾತ್ರಿ ರಿಪ್ಪನ್ ಪೇಟೆ ಪೋಲೀಸ್ ಠಾಣೆಯಲ್ಲಿ ಎಸ್ ಹೆಚ್ ಒ ಪ್ರಭಾರದಲ್ಲಿದ್ದಾಗ ನನಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಿಂದ ರಿಪ್ಪನ್ ಪೇಟೆ ನಗರದಲ್ಲಿ ಗಣಪತಿ ಮೆರವಣಿಗೆಯಲ್ಲಿ ಗುಂಪು

ಗಲಾಟೆಯಾಗಿ ಚಾಕುವಿನಿಂದ ಹಲ್ಲೆಯಾಗಿರುತ್ತದೆ, ಗಾಯಾಳುಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ67 ಫ್ರಾ.ಸಾ.18 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ಆಗ ನಾನು ರಿಪ್ಪನ್ ಪೇಟೆ ಪೋಲೀಸ್ ಠಾಣೆಯಿಂದ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಗಾಯಾಳುವಿನ ಹೇಳಿಕೆ ಪಡೆಯಲು ಹೋಗಿರುತ್ತೇನೆ, ಸದರಿ ಆಸ್ಪತ್ರೆಯಲ್ಲಿ ರಾತ್ರಿ 10-00 ರಿಂದ 11-30 ಗಂಟೆ ಸಮಯದಲ್ಲಿ ಗಾಯಾಳು ಆದ ಚಾಸಾ1 ರವರ ಹೇಳಿಕೆಯನ್ನು ನಿಪಿ 1 ರಂತೆ ವೈಧ್ಯಾಧಿಕಾರಿಗಳ ಸಮಕ್ಷಮ ಪಡೆದುಕೊಂಡಿರುತ್ತೇನೆ, ನಿಪಿ 1 ಕ್ಕೆ ನಿಪಿ1(ಬಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ68 ಫ್ರಾ.ಸಾ.18 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ನಂತರ ಆಸ್ಪತ್ರೆಯಿಂದ ಹೊರಟು ಠಾಣೆಗೆ ರಾತ್ರಿ 12-30 ಗಂಟೆಗೆ ತಲುಪಿ, ಚಾಸಾ1 ರವರ ಹೇಳಿಕೆಯ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಃ 116/2019 ರಲ್ಲಿ ಪ್ರಕರಣ ದಾಖಲು ಮಾಡಿಕೊಂಡು ನಿಪಿ 25 ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಹಿರಿಯ ಅಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ ಎಂದು, ನಿಪಿ 25 ಕ್ಕೆ

ನಿಪಿ25(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ69 ಫ್ರಾ.ಸಾ.18 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ28 ರವರಿಗೆ ಹಸ್ತಾಂತರ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 70 ಫ್ರಾ.ಸಾ.19 ಕೆ ಎನ್ ಪಾರ್ವತಿ ಬಾಯಿ, ಪಿ ಎಸ್ ಐ ರವರು ತಮ್ಮ ಸಾಕ್ಷ್ಯದಲ್ಲಿ- ದಿನಾಂಕಃ 08-11-2019 ರಂದು ಈ ಪ್ರಕರಣದ ಕಡತವನ್ನು ಚಾಸಾ27 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ, ಕಡತವನ್ನು ಪರಿಶೀಲನೆ ಮಾಡಿದಾಗ ಚಾಸಾ27 ರವರು ಮಾಡಿದ ತನಿಖೆ ಕ್ರಮಬದ್ಧವಾಗಿರುತ್ತದೆ, ದಿನಾಂಕಃ 08-11-2019 ರಂದು ಚಾಸಾ1 ಮತ್ತು ಚಾಸಾ10 ರವರ ರಕ್ತದ ಗುಂಪಿನ ವರದಿಯನ್ನು ನೀಡುವಂತೆ ರಿಪ್ಪನ್ ಪೇಟೆ ವೈಧ್ಯರಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ, ದಿನಾಂಕಃ 16-11-2019 ರಂದು ಚಾಸಾ1 ಮತ್ತು 10 ರವರ ರಕ್ತ ಕಲೆಯಾಗಿದ್ದ ಬಟ್ಟೆಗಳನ್ನು ಠಾಣಾ ಮಾಲುಪಟ್ಟಿ ಸಂಃ 101/2019 ರಲ್ಲಿ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ71 ಫ್ರಾ.ಸಾ.19 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ದಿನಾಂಕಃ 05–12–2019 ರಂದು ಚಾಕು ಮತ್ತು ಚಾಸಾ1 ಮತ್ತು 10 ರವರ ರಕ್ತಕಲೆಯಾಗಿದ್ದ ಬಟ್ಟೆಗಳನ್ನು ಆರ್ ಎಫ್ ಎಸ್ ಎಲ್ ದಾವಣಗೆರೆಗೆ ಚಾಸಾ23 ರವರ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ, ದಿಃ25–02–2020 ರಂದು ಪಂಚರಿಗೆ ನೋಟೀಸ್ ನ್ನು ಜಾರಿ ಮಾಡಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಆರೋಪಿತರ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ72 ಫ್ರಾ.ಸಾ.19 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಿಪಿ 26 ಪಂಚನಾಮೆಯನ್ನು ಬೆಳಿಗ್ಗೆ 10–30 ರಿಂದ 11–00 ಗಂಟೆ ವರೆಗೆ ಮಾಡಿರುತ್ತೇನೆ, ನಿಪಿ 26 ಕ್ಕೆ ನಿಪಿ26(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ73 ಫ್ರಾ.ಸಾ.19 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ದಿನಾಂಕಃ 27–02–2020 ರಂದು ರಿಪ್ಪನ್ ಪೇಟೆ ಸರ್ಕಾರಿ ಆಸ್ಪತ್ರೆಯಿಂದ ಗಾಯಾಳುಗಳಾದ ಚಾಸಾ1 ಮತ್ತು 10 ರವರ ಗಾಯದ ಪ್ರಮಾಣಪತ್ರವನ್ನು ನಿಪಿ 17 ಮತ್ತು ನಿಪಿ 18 ರಂತೆ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಹಾಗೂ ನಿಪಿ –17 ಮತ್ತು ನಿಪಿ 18 ಕ್ಕೆ

ನಿಪಿ17(ಬಿ) ಮತ್ತು ನಿಪಿ 18(ಬಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ74 ಪ್ರಾ.ಸಾ.19 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ದಿನಾಕಂಃ 16-03-2020 ರಂದು ಘಟನೆ ನಡೆದ ಸ್ಥಳದ ಬಗ್ಗೆ ಗ್ರಾಮ ಪಂಚಾಯಿತಿ ರಿಪ್ಪನ್ ಪೇಟೆಯವರಿಂದ ನಿಪಿ -16 ದೃಢೀಕರಣ ಪತ್ರವನ್ನು ಸ್ವೀಕರಿಸಿರುತ್ತೇನೆ, ನಿಪಿ16 ಕ್ಕೆ ನಿಪಿ16(ಬಿ) ರಂತೆ ಸಹಿ ಮಾಡಿರುತ್ತೇನೆ , ನಂತರ ರಿಪ್ಪನ್ ಪೇಟೆ ಗ್ರಾಮ ಪಂಚಾಯಿತಿಯಿಂದ ಡಿಮಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ನ್ನು ನಿಪಿ 15 ರಂತೆ ಪಡೆದುಕೊಂಡಿರುತ್ತೇನೆ, ನಿಪಿ15 ಕ್ಕೆ ನಿಪಿ15(ಬಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 75 ಪ್ರಾ.ಸಾ.19 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ದಿನಾಂಕಃ 27-02-2020 ರಂದು ಆರ್ ಎಫ್ ಎಸ್ ಎಲ್ ದಾವಣಗೆರೆಯಿಂದ ನಿಪಿ 20 ಎಫ್ ಎಸ್ ಎಲ್ ವರದಿಯನ್ನು ಪಡೆದಿರುತ್ತೇನೆ, ನಿಪಿ20 ಕ್ಕೆ ನಿಪಿ20(ಬಿ) ರಂತೆ ಸಹಿ ಮಾಡಿರುವುದಾಗಿ , ಆರೋಪಿತರ ಸ್ವ ಇಚ್ಛಾ ಹೇಳಿಕೆ ಪಡೆಯುವ ಸಮಯಕ್ಕೆ ನಿಪಿ 27 ರಿಂದ ನಿಪಿ 32 ರಂತೆ ಫೋಟೋ ತೆಗೆದಿರುವುದಾಗಿ , ನಾನು ತನಿಖಾ ಕಾಲದಲ್ಲಿ ಫೋಟೋಗಳನ್ನು ತೆಗೆದ ಬಗ್ಗೆ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ಅಡಿಯಲ್ಲಿ ನಿಪಿ 33 ರಂತೆ ದೃಢೀಕರಣ ಪತ್ರ

ನೀಡಿರುತ್ತೇನೆ, ನಿಪಿ33 ಕ್ಕೆ ನಿಪಿ33(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ76 ಫ್ರಾ.ಸಾ.19 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ಆರೋಪಿತರು ನೀವೇ ಆಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 77 ಫ್ರಾ.ಸಾ.19 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ದಿನಾಂಕಃ 25-02-2020 ರಂದು ಪ್ರಾಥಮಿಕ ಆರೋಗ್ಯ ಕೇಂದ್ರ ರಿಪ್ಪನ್ ಪೇಟೆ ವೈಧ್ಯಾಧಿಕಾರಿಗಳು ನಾನು ಹಾಜರುಪಡಿಸಿದ ಚಾಕುವಿನಿಂದ ಹಲ್ಲೆ ಮಾಡಿದರೆ ಗಾಯದ ಪ್ರಮಾಣಪತ್ರದಲ್ಲಿ ಹೇಳಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದು ನಿಪಿ 19 ರಂತೆ ವರದಿ ನೀಡಿರುತ್ತಾರೆ, ನಿಪಿ 19 ಕ್ಕೆ ನಿಪಿ 19(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ78 ಫ್ರಾ.ಸಾ.19 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ನಂತರ ತನಿಖೆ ಪೂರ್ಣಗೊಂಡ ನಂತರ ಆರೋಪಿತರ ವಿರುದ್ಧ ನ್ಯಾಯಾಲಯದ ಮುಂದೆ ದೋಷಾರೋಪಣಾ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 79 ನಿಮ್ಮ ಪರ ಸಾಕ್ಷಿಗಳು ಇದ್ದಾರೆಯೇ ?

ಉತ್ತರ :

ಪ್ರಶ್ನೆ:80  ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉತ್ತರ

ಆರೋಪಿತರಿಗೆ ಮೇಲ್ಕಂಡ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ನುಡಿದಂತೆ ಉತ್ತರವನ್ನು ನನ್ನ ಹಸ್ತಾಕ್ಷರದಲ್ಲಿ ಪಡೆದಿರುತ್ತೇನೆ.

ದಿನಾಂಕಃ 04 ನೇ ನವೆಂಬರ್, 2025 ನೇ ಇಸವಿ.

**(ರವೀಂದ್ರ ಆರ್.)**
**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಶಿವಮೊಗ್ಗ (ಪಿಠಾಸೀನ ಸಾಗರ).**